# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s Project Eleven Renewable Power Private Limited ಕಂಪನಿಗೆ ಕೊಪ್ಪಳ ಜಿಲ್ಲೆ, ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 80 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :** 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/08/PERPPL - 80 MW/Koppal/F-24/2023/0786, ದಿನಾಂಕ: 10.03.2023.

2) ದಿನಾಂಕ:14.03.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡಾವಳಿ.

3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ. (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Project Eleven Renewable Power Private Limited ಕಂಪನಿಯು ಕೊಪ್ಪಳ ಜಿಲ್ಲೆ, ಯಲಬುರ್ಗಾ ಮತ್ತು ಕುಕನೂರು ತಾಲ್ಲೂಕುಗಳ ರಾಜೂರ, ಕೂಕನೂರು, ಅಡೂರ, ದ್ಯಾಂಪುರ, ಸಂಗನಾಲ, ಕಲ್ಲೂರ, ಮತ್ತು ಚೆನ್ನಪ್ಪನಹಳ್ಳಿ ಗ್ರಾಮಗಳಲ್ಲಿ 80 ಮೆ.ವ್ಯಾ. ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು Proposed Koppal-II CTU ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 10 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s Project Eleven Renewable Power Private Limited ಇವರು ಹಂಚಿಕೆಗಾಗಿ ಕೋರಿರುವ ಸ್ಥಳವು ಸರ್ಕಾರದ ಪತ್ರ ಸಂಖ್ಯೆ:ಎನರ್ಜಿ 105 ಎನ್‌ಸಿಇ 2022, ದಿನಾಂಕ:19.03.2022ರಲ್ಲಿ M/s Arkarva Renewable Consultants Private Limited ಕಂಪನಿಗೆ 8 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿರುವ ಸ್ಥಳದ ಮೇಲೆ ಬರುತ್ತದೆ. M/s Arkarva Renewable Consultants Private Limited ಕಂಪನಿಯು ತಾತ್ವಿಕ ಅನುಮೋದನೆ ಪಡೆದಿರುವ 8 ಮೆ.ವ್ಯಾ. ಸಾಮರ್ಥ್ಯಕ್ಕೆ 4 ಸಂಖ್ಯೆಯ 2 ಮೆ.ವ್ಯಾ. ಸಾಮರ್ಥ್ಯದ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ನವೀಕರಿಸಬಹುದಾದ ಇಂಧನ ನೀತಿ 2022-27ರನ್ವಯ ಸದರಿಯವರಿಗೆ ಪ್ರತಿ ವಿಂಡ್ ಟರ್ಬೈನ್‌ಗೆ 5 ಎಕರೆಯಂತೆ ಒಟ್ಟು 20 ಎಕರೆ ಜಮೀನನ್ನು ಹೊರತುಪಡಿಸಿ, ಬಾಕಿ ಉಳಿದ ಪ್ರದೇಶದಲ್ಲಿ M/s Project Eleven Renewable Power Private Limited ಕಂಪನಿಯು 80 ಮೆ.ವ್ಯಾ. ಸಾಮರ್ಥ್ಯವನ್ನು M/s Arkarva Renewable Consultants Private Limited ಕಂಪನಿ ಯೋಜನೆಗೆ ಯಾವುದೇ ತೊಂದರೆಯಾಗದಂತೆ ಅನುಷ್ಠಾನಗೊಳಿಸತಕ್ಕದ್ದು.

M/s Project Eleven Renewable Power Private Limited ದಿನಾಂಕ:10.09.2021ರಂದು ನೋಂದಾವಣೆಗೊಂಡಿದ್ದು, ಇದರ ನೋಂದಾಯಿತ ಕಚೇರಿಯು ಬೆಂಗಳೂರಿನಲ್ಲಿ ಸ್ಥಾಪಿತಗೊಂಡಿರುತ್ತದೆ. ಸದರಿ ಕಂಪನಿಯು M/s Ayana Renewable Power Private Limited ಕಂಪನಿಯಿಂದ ಸ್ಥಾಪಿತವಾದ SPV

...2

ಸಂಸ್ಥೆ ಆಗಿರುತ್ತದೆ. ಸದರಿ ಕಂಪನಿಯ ನೆಟ್‌ವರ್ತ್ ದಿನಾಂಕ:31.03.2022ರ ಅಂತ್ಯಕ್ಕೆ ರೂ.2303.13 ಕೋಟಿಗಳಾಗಿರುತ್ತದೆ ಎಂದು ಚಾರ್ಟೆಡ್ ಅಕೌಂಟೆಂಟ್ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

M/s Project Sixteen Renewable Power Private Limited ಕಂಪನಿಯು ನವೀಕರಿಸಬಹುದಾದ ಇಂಧನ ನೀತಿ 2022-27ರಂತೆ 80 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಅರ್ಜಿಯೊಂದಿಗೆ ಪಾವತಿಸಬೇಕಾಗಿರುವ ಒಟ್ಟು ಸಂಸ್ಕರಣಾ ಶುಲ್ಕದಲ್ಲಿ 30% ಮೊತ್ತವನ್ನು ಪಾವತಿಸಿರುತ್ತಾರೆ. ಬಾಕಿ ಉಳಿದ 70% ಸಂಸ್ಕರಣಾ ಶುಲ್ಕವನ್ನು ಹಂಚಿಕೆ ಆದೇಶ ಹೊರಡಿಸಿದ ನಂತರ ಕೆ.ಆರ್.ಇ.ಡಿ.ಎಲ್. ನಿಯಮಿತದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪೂರ್ವದಲ್ಲಿ ಸಂದಾಯ ಮಾಡಬೇಕಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Project Eleven Renewable Power Private Limited ಇವರು ಕೊಪ್ಪಳ ಜಿಲ್ಲೆಯ, ಯಲಬುರ್ಗಾ ಮತ್ತು ಕೂಕನೂರು ತಾಲ್ಲೂಕುಗಳ ರಾಜೂರ, ಕೂಕನೂರು, ಅಡೂರ, ದ್ಯಾಂಪುರ, ಸಂಗನಾಲ, ಕಲ್ಲೂರ, ಮತ್ತು ಚೆನ್ನಪ್ಪನಹಳ್ಳಿ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 80ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿರುತ್ತದೆ. ಸದರಿಯವರು 2.7 ಮೆ.ವ್ಯಾ ಸಾಮರ್ಥ್ಯದ 29 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಅಳವಡಿಸುವ Wind Turbine ಗಳಿಗೆ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಆದುದರಿಂದ ಸದರಿ ಅಭಿವೃದ್ಧಿದಾರರು ಅಳವಡಿಸುವ ಪ್ರತಿ ಟರ್ಬೈನ್‌ನ footprint ಜಾಗಕ್ಕೆ 10 ಎಕರೆಗಳಂತೆ ಒಟ್ಟು 290ಎಕರೆ (29 Nos of WTG x 10 Acres = 290 Acres) ಜಮೀನನ್ನು ಮಾತ್ರ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಟೋಪೋಶೀಟ್ ಸಂಖ್ಯೆ:48M/14ರಲ್ಲಿ ಉಪಯೋಗಿಸಿಕೊಳ್ಳಬಹುದಾಗಿದೆ ಹಾಗೂ ಸದರಿಯವರು ಅಳವಡಿಸುವ ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ ಮಾರ್ಗಸೂಚಿಯಂತೆ (Micrositing Guidelines) ಅಳವಡಿಸಬೇಕಾಗಿರುತ್ತದೆ. ಆದ ಕಾರಣ ಯೋಜನೆಗೆ ಬೇಕಾಗುವ ಜಮೀನನ್ನು ಪಡೆಯುವುದು ಮತ್ತು CTU ನಿಂದ Evacuation ಅನುಮತಿ ಪತ್ರ ಹಾಗೂ LTA approval ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ.

ನಿರ್ದೇಶಕರು (ತಾಂತ್ರಿಕ), ಕೆಪಿಟಿಸಿಎಲ್ ಇವರು ಸದರಿ ಯೋಜನೆಗೆ Proposed 765/400kV CTU Substation at Koppal-II ಇಂದ evacuation ನೀಡಲು KPTCL ನಿಯಮಿತದಿಂದ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿದರು. ಈ ಕೆಳಕಂಡ ಷರತ್ತುಗಳಿಗೊಳಪಟ್ಟು M/s Project Eleven Renewable Power Private Limited ಕಂಪನಿಗೆ 80 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ನೀಡಲು ಸಮಿತಿಯು ಸರ್ವಾನುಮತಿಯಿಂದ ಶಿಫಾರಸ್ಸು ಮಾಡಿರುತ್ತದೆ.

i. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು Proposed Koppal-II CTU ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡಲು.
ii. ಸದರಿ ಯೋಜನೆಗೆ CTU ನಿಂದ Evacuation ಅನುಮತಿ ಪತ್ರ ಹಾಗೂ LTA ಅನುಮತಿ ಪಡೆದು ಅನುಷ್ಠಾನಗೊಳಿಸುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ.
iii. ಈಗಾಗಲೇ ಇತರೆ ಅಭಿವೃಧ್ಧಿದಾರರುಗಳು ಹಂಚಿಕೆ ಅನುಮೋದನೆಯನ್ನು ಪಡೆದಿರುವ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯ WTG Co-ordinate ಗಳು Overlap ಆಗಿದ್ದಲ್ಲಿ, ಅಂತಹ WTG ಗಳಸಾಮರ್ಥ್ಯವು ರದ್ದುಗೊಳ್ಳುತ್ತದೆ.
iv. ಅಭಿವೃದ್ಧಿದಾರರು ಸದರಿ ಯೋಜನೆಯನ್ನು RE Policy 2022-27 ಹಾಗೂ ಸದರಿ ನೀತಿಗೆ ನೀಡಿದ ತಿದ್ದುಪಡಿ - 1 ರ ಪ್ರಕಾರ ಹಂಚಿಕೆ ಆದೇಶ ನೀಡಿದ ದಿನಾಂಕದಿಂದ 3 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಬೇಕಾಗುತ್ತದೆ.
v. ಹಂಚಿಕೆ ಆದೇಶ ನೀಡಿದ ದಿನಾಂಕದಿಂದ 45 ದಿನಗಳೊಳಗೆ ಪ್ರತೀ ಮೆ. ವ್ಯಾ ಗೆ ರೂ.5 ಲಕ್ಷದಂತೆ ನೆರವೇರಿಕೆ ಬ್ಯಾಂಕ್ ಖಾತರಿಯ ಜೊತೆಗೆ ಬಾಕಿ ಪಾವತಿಸಾಬೇಕಾಗಿರುವ 70% ಸಂಸ್ಕರಣಾ ಶುಲ್ಕವನ್ನು ಕ್ರೆಡೆಲ್ ಗೆ ಸಲ್ಲಿಸಿ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕಾಗಿರುತ್ತದೆ.
vi. ಸದರಿ ಯೋಜನೆಗೆ ಬೇಕಾಗುವ ಜಮೀನನ್ನು ಕಂದಾಯ ಇಲಾಖೆಯಿಂದ ನೇರವಾಗಿ ಗುತ್ತಿಗೆ ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ.
vii. ಅಭಿವೃದ್ಧಿದಾರರು ಯೋಜನೆಗೆ ಅವಶ್ಯವಿರುವ ನಿರಾಕ್ಷೇಪಣಾ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸುವುದು.

....3